


ಸೂತಕ. ಬಂದಿದ್ದ ಇನ್ನೊಬ್ಬ ಪುರೋಹಿತನಿಗೆ ತಾನು ಸಂಸ್ಕಾರ ಕಾರ್ಯ ಮಾಡಬೇಕೋ? ಬೇಡವೋ? ಎನ್ನುವ ಗೊಂದಲ. 'ಅಕಸ್ಮಾತ್ ನಾನು ಮಾಡಿದರೆ ಅವರೇನು ತಿಳಿದು ಕೊಳ್ಳುವರೋ?' ಎಂಬ ಇನ್ನೊಬ್ಬ ಪುರೋಹಿತನ ಆತಂಕ ದೂರ ಮಾಡುವಷ್ಟರಲ್ಲಿ ಇವನ ತಾಳ್ಮೆಯ ಪರೀಕ್ಷೆಯಾಗಿ ಹೋಗಿತ್ತು. ಕೊನೆಗೂ ಮತ್ತೊಬ್ಬ ಪುರೋಹಿತ ಸಂಸ್ಕಾರ ಮಾಡಲು ಒಪ್ಪಿ, ಸಿದ್ಧತೆ ಮಾಡಿಕೊಂಡ. ಇನ್ನು ತಮ್ಮನನ್ನು ಕಳೆದುಕೊಂಡ ಅಕ್ಕಂದಿರ ಗೋಳು. ಮನೆಯಲ್ಲಿದ್ದ ನಡೆಯಲು ಆಗದ ಎರಡು ಹಿರಿಯ ಜೀವಗಳ ಮೌನ ರೋದನ.

ಅಂಗಳದಲ್ಲಿ ನೆರೆದಿದ್ದ ನೂರಾರು ಜನರ ನೂರಾರು ಮನಸ್ಸುಗಳಲ್ಲಿ, 'ಇವ ಎಂತಕೆ ನೇಣ ಹಾಯ್ಕಂಡ?' ಎಂಬ ಬಿಡಿಸಲಾಗದ ಪ್ರಶ್ನೆ. ಮಧ್ಯದಲ್ಲಿ ವಾಟ್ಸ್‌ಆಪ್ ಮೂಲಕ ಹರಿದಾಡಿ ಮನೆಯ ಅಂಗಳಕ್ಕೂ ತಲುಪಿದ ಹುಬ್ಬಳ್ಳಿಯ ಅಣ್ಣನ ನೇಣು ಬಿಗಿದು ನೇತಾಡುತ್ತಿದ್ದ ಶವದ ವಿಡಿಯೋ. ಆ ವಿಡಿಯೋ ನೋಡುತ್ತಾ ಅಂಗಳದ ಮೂಲೆಗಳಲ್ಲಿ ನಿಂತಿದ್ದ ಬುದ್ಧಿವಂತರಿಂದ ಭರ್ಜರಿ ವಿಶ್ಲೇಷಣೆ.

'ಬಡ್ಡಿ ವ್ಯಾಪಾರ ಮಾಡ್ತಿದ್ದ. ಅದರಲ್ಲಿ ಎಲ್ಲ ಕಳೆದುಕೊಂಡ್ನಂತೆ!'

'ಗಂಡ– ಹೆಂಡತಿಗೆ ಸರಿ ಇರಲಿಲ್ಲವಂತೆ'

'ಇವನು ಯಾರನ್ನೋ ಇಟ್ಟಕೊಂಡಿದ್ನಂತೆ'

'ಕ್ರಿಕೆಟ್ ಬೆಟ್ಟಿಂಗ್ ಹುಚ್ಚಿತ್ತಂತೆ. ಅದರಲ್ಲಿ ಎಲ್ಲ ಕಳ್ಕೊಂಡ್ನಂತೆ...'

ಒಂದಾದ ಮೇಲೊಂದರಂತೆ ಅಂತೆಕಂತೆಗಳ ಕಥೆಗಳು ಅಂಗಳದಲ್ಲಿ ಬಿಚ್ಚಿಕೊಂಡವು.

ಈ ಎಲ್ಲದರ ನಡುವೆ ರಸ್ತೆಯ ತುದಿಯೇರಿ ನಿಂತು ಆಂಬುಲೆನ್ಸ್ ಜೊತೆ ಬರುತ್ತಿದ್ದವರ ಜೊತೆ ಸಂಪರ್ಕ ಸಾಧಿಸಿ ಬಂದ ಸಣ್ಣ ಮಾವ, 'ಇಲ್ಲೇ ಹತ್ರ ಬಂದೀರ. ಇನ್ನೈದ್ಹತ್ತ ನಿಮಿಷ. ಎಲ್ರೂ ರೆಡಿ ಆಯ್ನಿ' ಎಂದ ಕೂಡಲೇ ಕೂತವರೆಲ್ಲ ಎದ್ದು ನಿಂತರು.

ಐದೇ ನಿಮಿಷದಲ್ಲಿ ನೆಂಟರಿಷ್ಟರೆಲ್ಲಾ ತುಂಬಿದ್ದ ಐದಾರು ಕಾರುಗಳು ಜೊತೆಗೆ ಆಂಬುಲೆನ್ಸ್ ಮನೆಯಂಗಳದಲ್ಲಿ ಬಂದು ನಿಂತಿತು. ಆಂಬುಲೆನ್ಸ್‌ನಿಂದ ಕೆಳಗಿಳಿದವನೇ ಓಡಿ ಬಂದ ತಮ್ಮ ಇವನನ್ನು ಗಟ್ಟಿಯಾಗಿ ತಬ್ಬಿಕೊಂಡು, 'ಇವ ಎಂತಕೇ ಹಿಂಗ ಮಾಡ್ಕಂಡ್ನೋ ಏನೋ? ಇದ ಸಾಯೂ ವಯಸ್ಸಾ ಮಾರಾಯಾ?' ಎಂದು ಹೆಗಲ ಮೇಲೆ ತಲೆಯಿಟ್ಟು ಕಣ್ಣೀರು ಹಾಕಿದ. ಹಿಂದೆ ನಿಂತಿದ್ದ ಅಕ್ಕ-ತಂಗಿಯರ ಅಳುವಿನ ಕೂಗು ಇಡೀ ಮನೆಯನ್ನೇ ಕಂಗೆಡಿಸಿದರೂ, ಇವನ ಕಣ್ಣಲ್ಲಿ ಮಾತ್ರ ಒಂದೇ ಒಂದು ಹನಿ ನೀರು ಉಕ್ಕಲಿಲ್ಲ.

ಎದುರಲ್ಲಿದ್ದ ಚಟ್ಟ ಆಂಬುಲೆನ್ಸ್ ಒಳಗೆ ತಣ್ಣಗೆ ಮಲಗಿದ್ದ ಶವಕ್ಕಾಗಿ ಕಾದು ಕುಳಿತಿತ್ತು.

ಕೈಯಲ್ಲಿ ಕೋಲು ಹಿಡಿದು ಕುಂಟುತ್ತಲೇ ಮನೆಯ ಜಗಲಿಯವರೆಗೆ ಬಂದ ಚಿಕ್ಕಮ್ಮ 'ನನ್ನ ಮಗನ್ನ